ಅ) ಸರಕಾರದ ಈಗಿರುವ ಆಜ್ಞೆಯ ಪ್ರಕಾರ ವನ್ಯಜೀವಿಗಳಿಂದ ಹಾನಿಗೊಂಡ ಬೆಳೆಗಳಿಗೆ ಸಂಬಂಧಪಟ್ಟ ರೈತರುಗಳಿಗೆ ಪರಿಹಾರವನ್ನು ಕೊಡಲಾಗುತ್ತಿದೆ.

ವನ್ಯ ಪ್ರಾಣಿಗಳ ಹಾವಳಿ ಹೆಚ್ಚಾದ ಕಡೆಗಳಲ್ಲಿ ಅವನ್ನು ಕಾಡಿಗೆ ದೂರ ಅಟ್ಟಲು ಅಲ್ಲಲ್ಲಿ ಅರಣ್ಯ ರಕ್ಷಕರನ್ನು ಕೂಡಾ ನೇಮಿಸಿಕೊಳಲಾಗಿದೆ.

ಶ್ರೀ ಪಿ. ತಿಪ್ಪಯ್ಯ.-- ವನ್ಯಜೀವಿಗಳಿಂದ ಹಾನಿಗೊಂಡ ಬೆಳೆಗಳಿಗೆ ಸಂಬಂಧಪಟ್ಟ ಹಾಗೆ ರೈತರಿಗೆ ಪರಿಹಾರ ಕೊಡಲಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಅಷ್ಟು ಮಾಡಿದರೆ ಸಾಲದು, ವನ್ಯ ಜೀವಿಗಳು ಬರದಂತೆ ಮುಳ್ಳು ಬೇಲಿ ಹಾಕುವಂಥ ವ್ಯವಸ್ಥೆಯಾಗಬೇಕು. ಶಾಶ್ವತವಾಗಿ ಪರಿಹಾರವಾಗುವಂತೆ ಕಾರ್ಯಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರಿ ಬಿ. ಎ. ಜೀವಿಜಯ.--ಅಧ್ಯಕ್ಷರೇ, ಈ ಪ್ರಶ್ನೆಗೆ ಅನೇಕಬಾರಿ ಉತ್ತರ ಕೊಟ್ಟಿದ್ದೇನೆ. ಪರಿಹಾರ ಕೊಡತಕ್ಕದ್ದು ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಅವರಿಗೆ ಅಧಿಕಾರ ಇತ್ತು. ಈಗ ಅದನ್ನು ಡೆಪ್ಯುಟಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಅವರಿಗೆ ಕೊಟ್ಟಿದ್ದೇವೆ. ನೊದಲು ತೋಟಗಾರಿಕೆ ಇಲಾಖೆಯ ಸಲಹೆ ಪಡೆಯುತ್ತಿದ್ದೆವು. ಈಗ ಅರಣ್ಯ ಇಲಾಖೆಯವರ ಫಸಲು ನಾಶವಾದ ತಕ್ಷಣ ಪರಿಹಾರ ಕೊಡುತ್ತಾರೆ. ಪರಿಹಾರವನ್ನು ಆದಷ್ಟು ಜಾಗ್ರತೆ ಕೊಡುತ್ತಿದ್ದಾರೆ.

ಶ್ರೀ ಪಿ. ತಿಪ್ಪಯ್ಯ.--ಪ್ರಾಣಿಗಳು ಬರುತ್ತವೆ, ಕಬ್ಬು ಬೆಳೆ ನಾಶಮಾಡಿ ಹೋಗುತ್ತವೆ. ಹತ್ತು ಸಾವಿರ ರೂಪಾಯಿ ನಷ್ಟವಾದರೆ ಐದುನೂರು ರೂಪಾಯಿ ಪರಿಹಾರ ಕೊಡುತ್ತಾರೆ ಇದರಿಂದ ಏನು ಪ್ರಯೋಜನವಾಗುತ್ತದೆ.

ಶ್ರೀ ಜೀವಿಜಯ.-- ಅನೆಗೆ ಬೇಲಿ ಹಾಕಿ ತಡೆಯಲಿಕ್ಕೆ ಸಾಧ್ಯವೇ ಮಾನ್ಯ ಸದಸ್ಯರೇ ಯೋಚನೆ ಮಾಡಬೇಕು. ಅದಕ್ಕೆ ಕಂದಕವನ್ನು ಮಾಡುತ್ತಿದ್ದೇವೆ.

ಅಧ್ಯಕ್ಷರು.--ಪ್ರಶ್ನೋತ್ತರಗಳು ಮುಗಿದವು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಂತಾಮಣಿ ತಾಲ್ಲೂಕಿನ ಮುರುಗೆಮಲ್ಲಾ ಹೋಬಳಿಯ ಶ್ರೀ ಎ. ಕೆ. ನಾರಾಯಣಪ್ಪನವರ ಜಮೀನಿನಲ್ಲಿ ಹುಣಸೇ ಮರಗಳಿಗೆ ಮೂಲ್ಕಿ ಮೌಲ್ಯ ನಿಗದಿಪಡಿಸುವುದು.

272 (432) ಶ್ರೀ ಚೌಡರೆಡ್ಡಿ (ಚಿಂತಾಮಣಿ).--ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ --

ಅ) ಚಿಂತಾಮಣಿ ತಾಲೂಕಿನ ತಹಶೀಲ್ದಾರ್‌ರವರ ಕಾರ್ಯಾಲಯದಿಂದ ದಿನಾಂಕ 21-9-1961 ರಲ್ಲಿ ಎಲ್. ಎನ್. ಡಿ. 2021 : 60-61ರ ಮೇರೆಗೆ 2 ಎಕರೆ ಜಮೀನು ಚಿಂತಾಮಣಿ ತಾಲ್ಲೂಕು ಮುರಗಮಲ್ಲಾ ಹೋಬಳಿ ದಿಗವಕೋಟೆ ಗ್ರಾಮದ ಹರಿಜನ ಎ. ಕೆ. ನಾರಾಯಣಪ್ಪ ಬಿನ್ ನರಸಪ್ಪ ಎಂಬುವರಿಗೆ ಮಂಜೂರಾಗಿದ್ದು ಸದರಿ ಜಮೀನಿನಲ್ಲಿ 3 ಹುಣಸೇ ಮರಗಳಿಗೆ ಮೂಲ್ಕಿ ವಿಧಿಸುವಂತೆ ಪಿ. ಡಿ. ಆರ್. ನಂ. 5 : 589 ರಂತೆ ಜಿಲ್ಲಾ ಅರಣ್ಯ ಇಲಾಖೆಯ ವಿಭಾಗಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡಿರುವ ಪತ್ರದ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ;

ಆ) ಈ ಬಗ್ಗೆ ಅನೇಕ ಸಾರಿ ತಹಶೀಲ್ದಾರ್‌ರವರ ಕಾರ್ಯಾಲಯದಿಂದ ಜಿಲ್ಲಾ ಅರಣ್ಯ ಅಧಿಕಾರಿಗಳವರಿಗೆ ಪತ್ರಗಳನ್ನು ಬರೆದರೂ ಆ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ;

ಇ) ಮೂಲ್ಕಿ ನಿಗದಿಪಡಿಸಲು ಕಾಲಾವಧಿಯನ್ನೇನಾದರೂ ನಿಗದಿಗೊಳಿಸಲಾಗಿದೆಯೇ ;

ಈ) ಪ್ರತಿವರ್ಷವು ಈ ಹುಣಸೇ ಮರಗಳನ್ನು ಇಲಾಖೆಯವರು ಹರಾಜು ಮಾಡುತ್ತಿರುವುದರಿಂದ ಈ ಬಡಜನರಿಗೆ ಅನ್ಯಾಯವಾಗುತ್ತಿರುವುದು ಈ ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಉ) ಪ್ರತಿವರ್ಷ ಹುಣಸೇ ಮರಗಳ ಪೋಷಣೆ ಮಾಡಿ ತನ್ನ ಜಮೀನುನಲ್ಲಿದ್ದ ಫಸಲು ಬರುವಾಗ ಅರಣ್ಯಾಧಿಕಾರಿಗಳು ಹರಾಜು ಹಾಕುತ್ತಿರುವುದನ್ನು ಸರ್ಕಾರದವರು ತಪ್ಪಿಸಿ ಮೂಲ್ಕಿ ವಿಧಿಸಲು ಅವಕಾಶ ಕಲ್ಪಿಸಿ ಕೊಡಲು ಕ್ರಮ ಕೈಗೊಳ್ಳುವರೇ ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).--

ಅ) ಕೋಲಾರದ ಅರಣ್ಯ ವಿಭಾಗಧಿಕಾರಿ (ಉಪ ಅರಣ್ಯ ಸಂರಕ್ಷಣಾಧಿಕಾರಿ) ಯವರನ್ನು ಉದ್ದೇಶಿಸಿ ಚಿಂತಾಮಣಿ ತಾಲ್ಲೂಕಿನ ತಹಸೀಲ್ದಾರ್‌ರವರು ಬರೆದ ಪತ್ರದ ನಂ. 21 : 81-82, ತಾ॥ 28-10-1983 ಕ್ಕೆ ಕೋಲಾರ ಅರಣ್ಯ ವಿಭಾಗಾಧಿಕಾರಿಯವರು ಉತ್ತರಿಸುತ್ತಾ ಅವರ ಪತ್ರದ ಸಂಖ್ಯೆ : ಎಸ್. ಎ. ಎಸ್. ಮಾಲ್ಕಿ : ಸಿ ಆರ್. 83-84ತಾ॥ 14-12-1983 ರಲ್ಲಿ ಈ ಮರಗಳ ಮೌಲ್ಯ ರೂ. 1,200-00 ಎಂದು ತಿಳಿಸಿರುತ್ತಾರೆ.

ಆ) ಮೇಲೆ ತಿಳಿಸಿರುವಂತೆ ಕೋಲಾರ ಅರಣ್ಯ ವಿಭಾಗಾಧಿಕಾರಿಯವರು ಈ ವಿಷಯದ ಬಗ್ಗೆ ಕ್ರಮವನ್ನು ತೆಗೆದುಕೊಂಡು ಚಿಂತಾಮಣಿ ಶಹಶೀಲ್ದಾರ್‌ರವರಿಗೆ ಉತ್ತರವನ್ನು ಕೊಟ್ಟಿರುತ್ತಾರೆ.

ಇ) ಇಲ್ಲ.

ಈ) ಭೂಮಿಯ ಮಾಲಿಕನು ಮರಗಳ ಮೌಲ್ಯವನ್ನು ಸರ್ಕಾರಕ್ಕೆ ಸಂದಾಯ ಮಾಡಿ ತಹಶೀಲ್ದಾರ್ ರವರು ಮರಗಳನ್ನು ಭೂ ಮಾಲೀಕರಿಗೆ ಒಪ್ಪಿಸುವವರಿಗೆ ಅರಣ್ಯ ಇಲಾಖೆಯು ಮರದ ಫಸಲನು ಕಾನೂನಿನ ಪ್ರಕಾರ ಹರಾಜು ಮಾಡಬೇಕಾಗುತ್ತದೆ.

ಉ) ಮರಗಳನ್ನು ಕಂದಾಯ ಇಲಾಖೆಯು ಭೂಮಾಲೀಕನಿಗೆ ಒಪ್ಪಿಸುವ ಆಜ್ಞೆ ಹೊರಡಿಸಿದ್ದ ನಂತರ ಮತ್ತು ಅಮರಾಯಿ ಮಾರಾಟದ ಪಟ್ಟಿಯಿಂದ ಈ ಮರಗಳನ್ನು ತೆಗೆದ ನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಮುಂದಿನ ಕ್ರಮ ತೆಗೆದುಕೊಳ್ಳುವರು.

ಲಿಂಗಸಗೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳುವ ಬಗ್ಗೆ.

277(713) ಶ್ರೀ ಬಸವರಾಜ ಪಾಟೀಲ್ ಅನ್ವರಿ (ಲಿಂಗಸುಗೂರು) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಲಿಂಗಸಗೂರು ತಾಲ್ಲೂಕಿನಲ್ಲಿ 1972 ರಿಂದ ಎಷ್ಟು ರಸ್ತೆಗಳನ್ನು ಲೋಕೋಪಯೋಗಿ ರಸ್ತೆಗಳನ್ನಾಗಿ ಪರಿವರ್ತಿಸಲಾಗಿದೆ ; ಹಾಗಿದ್ದಲ್ಲಿ ಲಿಂಗಸಗೂರುದಿಂದಾ ಗುಡದನಾಳಕ್ಕೆ, ಗುರುಗುಂದದಿಂದ ಕಾಳಾಪುರ ಮತ್ತು ಗುಂತಕಗೋಳಗ್ಯಾ ಮೂಲಕ ಲಿಂಗಸುಗೂರಿಗೆ ವೈದೊಡ್ಡಿಯಿಂದಾ ಯಲಗಟ್ಟಾಗೆ ಕೃಷ್ಣಾ ಮೇಲ್ದಂಡೆ ಯೋಜನೆ ರಸ್ತೆಯಿಂದ ವರೆಬಾಳ ಗೋಮಟ್ಟ ಮೂಲಕ ಅಮರೇಶ್ವರಕ್ಕೆ ಹೋಗುವ ರಸ್ತೆಗಳನ್ನು ಲೋಕೋಪಯೋಗಿ ಇಲಾಖಾ ರಸ್ತೆಗಳನ್ನಾಗಿ ತೆಗೆದುಕೊಳ್ಳುವ ಸಲಹೆ ಸರ್ಕಾರದವರಲ್ಲಿದೆಯೇ ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನಿರಾವರಿ ಸಚಿವರು).--10 ರಸ್ತೆಗಳನ್ನು ಲೋಕೋಪಯೋಗಿ ರಸ್ತೆಗಳನ್ನಾಗಿ ಪರಿವರ್ತಿಸಲಾಗಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಲೋಕೋಪಯೋಗಿ ಇಲಾಖೆಯ ವಶದಲ್ಲಿಲ್ಲದ ಕೆಲವು ಮುಖ್ಯವಾದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಈ ಪ್ರಸ್ತಾಪನೆಯನ್ನು ಅಂಗೀಕರಿಸುವ ಸಂದರ್ಭದಲ್ಲಿ ಪ್ರಶ್ನೆಯಲ್ಲಿ ಕಾಣಿಸಿದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ರಾಮದುರ್ಗ ತಾಲ್ಲೂಕಿನ ಕಟಿಕೋಳ ಗ್ರಾಮಕ್ಕೆ ಏತ ನೀರಾವರಿ ಯೋಜನೆ

283(821) ಶ್ರೀ ಎಫ್. ಎ ಕೊಪ್ಪದ್ (ರಾಮದುರ್ಗ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಮದುರ್ಗ ತಾಲ್ಲೂಕಿನ ಕಟಿಕೋಳ ಗ್ರಾಮಕ್ಕೆ ಯಾತ ನೀರಾವರಿ ಯೋಜನೆಯ ಬಗ್ಗೆ ಅಂದಾಜು ತಯಾರಿಸಿದ್ದು ನಿಜವೇ ;

ಆ) ಹಾಗಿದ್ದಲ್ಲಿ ಅದರ ಅಂದಾಜು ಮಂಜೂರಾಗಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರದವರು ಪರ್ಯಾಯ ಯೋಜನೆಯನ್ನೇನಾದರೂ ಪರಿಶೀಲಿಸುತ್ತಿರುವರೇ ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).--

ಅ) ಪ್ರಾರಂಭಿಕ ವರದಿ ಸಿದ್ಧವಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.